**ಸಾಕ್ಷಿಯನ್ನು ದಿನಾಂಕಃ 02.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಜೆ.ಎಸ್.ಆರ್. ವಕೀಲರಿಂದಃ**

ನಾನು ದ್ವಿತೀಯ ಪಿ.ಯು.ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವೃತ್ತಿಯಲ್ಲಿ ವ್ಯವಸಾಯಗಾರನಾಗಿರುತ್ತೇನೆ. ನನ್ನ ತಂದೆಗೆ ಇಬ್ಬರು ಮಕ್ಕಳಿರುತ್ತೇವೆ. ನನ್ನ ತಂದೆಗೆ ಸುಮಾರು 73 ವರ್ಷ ಪ್ರಾಯವಾಗಿರುತ್ತದೆ. ನಾನು ಮತ್ತು ನನ್ನ ತಂದೆ ಒಟ್ಟಿಗೆ ವಾಸ ಮಾಡುತ್ತಿದ್ದೇವೆ, ನನ್ನ ಹಿರಿಯ ಸಹೋದರ 2012 ರಿಂದ ಬೇರೆ ವಾಸವಿರುತ್ತಾರೆ. ನಮ್ಮ ಕುಟುಂಬದಲ್ಲಿ ಯಾವುದೇ ವಿಭಾಗ ಪತ್ರವಾಗಿರುವುದಿಲ್ಲ. ನಾನು ಮತ್ತು ನನ್ನ ಸಹೋದರ ಒಟ್ಟು ಕುಟುಂಬದಲ್ಲಿ ವಾಸವಿರುತ್ತೇವೆಂದರೆ ಸರಿಯಲ್ಲ. ನನ್ನ ತಂದೆ ಆರೋಗ್ಯವಾಗಿರುತ್ತಾರೆಂದರೆ ಸರಿ. ನಮ್ಮ ತಂದೆ ನ್ಯಾಯಾಲಯ ಮತ್ತು ಇತರೇ ಕಛೇರಿಗಳಿಗೆ ಓಡಾಡುತ್ತಾ ವ್ಯವಹಾರ ಮಾಡುತ್ತಾರೆಂದರೆ ಸಣ್ಣ-ಪುಟ್ಟ ವ್ಯವಹಾರ ಮಾಡುತ್ತಾರೆ. ನಮ್ಮ ಮನೆಯ ಎಲ್ಲಾ ವ್ಯವಹಾರವನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಾರೆಂದರೆ ಸರಿಯಲ್ಲ.

ಜಮೀನಿನಿಂದ ಎಷ್ಟು ಆಧಾಯ ಗಳಿಸುತ್ತೀರಿ ಎಂದರೆ ಕಲವು ಬಾರಿ ಬೆಳೆ ಚೆನ್ನಾಗಿ ಬಂದರೆ ವರ್ಷಕ್ಕೆ ರೂ, 50,000/- ರಿಂದ ರೂ. 1,50,000/- ಆದಾಯ ಬರುತ್ತದೆ. ನನಗೆ ಇಬ್ಬರು ಮಕ್ಕಳಿರುತ್ತಾರೆ. ನನ್ನ ಮಗ 7 ನೇ ತರಗತಿ ಮತ್ತು ನನ್ನ ಮಗಳು 5 ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನಿಮ್ಮ ಮನೆಯ ಖರ್ಚು-ವೆಚ್ಚಗಳನ್ನು ಜಮೀನಿಂದ ಬಂದ ಆದಾಯದಿಂದಲೇ ಮಾಡುತ್ತೀರಾ ಎಂದರೆ ನಾವು ಸ್ವಲ್ಪ ಹಾಕುತ್ತೇವೆ, ನನ್ನ ತಂದೆ ಸ್ವಲ್ಪ ಕೊಡುತ್ತಾರೆ. ಸಾಕ್ಷಿಯು ಸ್ವತಃ ಮುಂದುವರಿದು ನನ್ನ ತಂದೆ ಮತ್ತು ನನ್ನ ಬಳಿ ಪ್ರತ್ಯೇಕವಾಗಿ 02 ಟ್ರಾಕ್ಟರ್ ಗಳಿರುತ್ತವೆಂದು ನುಡಿಯುತ್ತಾರೆ. ನಮ್ಮ ಮನೆಯ

ಖರ್ಚಿಗಾಗಿ ತಿಂಗಳಿಗೆ ಸುಮಾರು ರೂ. 2,000/- ಬೇಕಾಗುತ್ತದೆ. ನನ್ನ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದಾರೆ. ಆರೋಪಿ ಆಗಸ್ಟ್ 2019 ರಂದು ಹಣ ಬೇಕೆಂದು ಕೇಳಿದ್ದು, ನಾನು ಸೆಪ್ಟಂಬರ್ 2019 ರಂದು ಆರೋಪಿಗೆ ಹಣವನ್ನು ಕೊಟ್ಟಿರುತ್ತೇನೆ. ಆರೋಪಿ ಯಾವ ಕಾರಣಕ್ಕಾಗಿ ನಿಮ್ಮ ಬಳಿ ಹಣ ಕೇಳಿರುತ್ತಾರೆಂದರೆ ಆರೋಪಿಗೆ ಸುಮಾರು 20 ಎಕರೆ ಜಮೀನು ಇರುತ್ತದೆ, ಅವರು ಸುಮಾರು ವ್ಯವಹಾರಗಳನ್ನು ಮಾಡುತ್ತಾರೆ, ಆರೋಪಿ ಮತ್ತು ಅವರ ಸಹೋದರರು ನಮ್ಮ ಗ್ರಾಮಕ್ಕೆ ದೊಡ್ಡ ಶ್ರೀಮಂತರು, ಅವರು ಕುಟುಂಬಕ್ಕೆ ನೂರಾರು ಎಕರೆ ಜಮೀನು ಇರುತ್ತದೆ ಮತ್ತು ಆರೋಪಿಯ ಹೆಸರಿನಲ್ಲಿ ಮೈಸೂರಿನಲ್ಲಿ ನಿವೇಶನಗಳು ಕೂಡ ಇದ್ದು, ಸುಮಾರು 04 ವರ್ಷಗಳಿಂದ ಜಮೀನುಗಳನ್ನು ಮಾರಾಟ ಮಾಡಿಕೊಂಡು ಬರುತ್ತಿದ್ದಾರೆ. ಆದ್ದರಿಂದ ಯಾವುದೋ ಒಂದು ವ್ಯವಹಾರ ಮಾಡುತ್ತಿದ್ದೇನೆಂದು ನನ್ನ ಬಳಿ ಹಣ ಪಡೆದಿರುತ್ತಾರೆ. ಯಾವ ವ್ಯವಹಾರಕ್ಕಾಗಿ ಹಣ ಪಡೆದಿರುತ್ತಾರೆಂದು ನನಗೆ ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿಯೂ ಕೂಡ ಆರೋಪಿ ಯಾವ ಉದ್ದೇಶಕ್ಕಾಗಿ ಹಣ ಪಡೆದಿರುತ್ತಾರೆಂದು ಹೇಳಿರುವುದಿಲ್ಲವೆಂದರೆ ಸರಿ. ಆರೋಪಿಗೆ ಹಣ ಕೊಡುವಾಗ ನಾನು, ನನ್ನ ಹೆಂಡತಿ ಮತ್ತು ಆರೋಪಿ ಇದ್ದರು. ನಾನು ಸೆಪ್ಟಂಬರ್ ಮೂರನೇ ವಾರದಂದು ಆರೋಪಿಗೆ ಹಣ ನೀಡಿರುತ್ತೇನೆ. ಸಾಮಾನ್ಯವಾಗಿ ನಾನು ಯಾವುದೇ ವ್ಯವಹಾರ ಮಾಡುವಾಗ ದಾಖಲೆ ಪಡೆದುಕೊಳ್ಳುವುದಿಲ್ಲ. ಈ ಪ್ರಕರಣದ ಆರೋಪಿ ನಮ್ಮ ಎದುರು ಮನೆಯವರಾಗಿರುವುದರಿಂದ ಮತ್ತು ದೂರದ ಸಂಬಂಧಿಯಾಗಿರುವುದರಿಂದ ವಿಶ್ವಾಸದಿಂದ ಹಣ ಕೊಟ್ಟಿರುತ್ತೇನೆ. ಬ್ಯಾಂಕ್ ವ್ಯವಹಾರದ ಬಗ್ಗೆ ನನಗೆ ಗೊತ್ತಿರುತ್ತದೆ. ಸಾಮಾನ್ಯವಾಗಿ ರೂ. 20,000/- ಕ್ಕಿಂತ ಹೆಚ್ಚು ಹಣವನ್ನು ನಗದು ಮೂಲಕ ವ್ಯವಹಾರ

ಮಾಡಿದರೆ ಚೆಕ್ ಅಥವಾ ಡಿ.ಡಿ. ಮುಖಾಂತರ ಕೊಡಬೇಕಾಗುತ್ತದೆಂಬ ನಿಯಮ ನನಗೆ ಗೊತ್ತಿಲ್ಲ. ನಾನು ಆರೋಪಿಗೆ ಹಣ ನೀಡುವ ಸಂದರ್ಭದಲ್ಲಿ ಭದ್ರತೆಗಾಗಿ ಯಾವುದೇ ದಾಖಲೆ ಪಡೆದಿಲ್ಲ ಆದರೆ ವಿಶ್ವಾಸದಿಂದ ಕೊಟ್ಟಿರುತ್ತೇನೆ. ನನ್ನ ಬಳಿ ಹಣ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ಬಳಿ ಆರೋಪಿಗೆ ಕೊಡುವಷ್ಟು ಹಣವಿರಲಿಲ್ಲವೆಂದರೆ ಸರಿಯಲ್ಲ. ಆರೋಪಿ ಹಣ ಪಡೆಯುವಾಗ 06-09 ತಿಂಗಳೊಳಗೆ ಹಣ ವಾಪಸ್ ಕೊಡುತ್ತೇನೆಂದು ಹೇಳಿದ್ದು, ನಾನು 09 ತಿಂಗಳಾದ ನಂತರ ಆರೋಪಿಯ ಬಳಿ ಹೋಗಿ ಹಣ ಕೇಳಿರುತ್ತೇನೆ. ನಾನು ಜುಲೈ 2020 ರಂದು ಹಣ ಕೊಡುವಂತೆ ಆರೋಪಿಯನ್ನು ಕೇಳಿರುತ್ತೇನೆ ಆದರೆ ದಿನಾಂಕ ನನಗೆ ಹೇಳಲಾಗುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಆರೋಪಿ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**